**5. ವಿಷಯ : ಹಾಸನ ಜಿಲ್ಲೆಯಲ್ಲಿ ಚಿರತೆ ಕಾಟವನ್ನು ತಪ್ಪಿಸುವ ಬಗ್ಗೆ.**

**ಶ್ರೀ ಹೆಚ್.ಡಿ. ರೇವಣ್ಣ** : ಮಾನ್ಯ ಅಧ್ಯಕ್ಷರೆ, ಅರಣ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಹಾಸನ ಜಿಲ್ಲೆಯಲ್ಲಿ ಏನಾಗಿದೆ ಎಂದರೆ, ಅರಸೀಕೆರೆಯಲ್ಲಿ ಕರಡಿ ಕಾಟ, ಹಾಸನದಲ್ಲಿ ಹಂದಿ ಕಾಟ. ಆಲೂರು, ಸಕಲೇಶ್‌ಪುರದಲ್ಲಿ ಆನೆ ಕಾಟ ನಮ್ಮಲ್ಲಿ ಚಿರತೆ ಕಾಟ, ನಗರ ಪ್ರದೇಶಕ್ಕೆ ಹೋದರೆ ನಾಯಿ ಕಾಟ ಇದೆ. ಇದನ್ನು ಯಾವ ರೀತಿಯಾಗಿ ತಪ್ಪಿಸಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ಇವತ್ತಿನ ದಿವಸ ಏನಾಗಿದೆ ಎಂದರೆ. ಚಿರತೆ ಕಾಟದಿಂದ ಯಾರೂ ಸಹ ಹೊರಗಡೆ ಓಡಾಡುವುದಕ್ಕೆ ಆಗದೆ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಹಾವಳಿಯಿಂದ ಈಗಾಗಲೇ ಮೂರು ಜನ ಸತ್ತು ಹೋಗಿದ್ದಾರೆ. ತೀರಿ ಹೋಗಿರುವ ಮೂರು ಜನರಿಗೆ ದುಡ್ಡನ್ನು ಕೊಡಬಹುದು. ಈಗ ಎರಡು ಲಕ್ಷ ಕೊಟ್ಟಿದ್ದು ಬಾಕಿ 3 ಲಕ್ಷ ರೂಪಾಯಿ ಕೊಡುತ್ತೇವೆಂದು ಮೊನ್ನೆ ದಿವಸ DFO ರವರು ಹೇಳಿದ್ದಾರೆ. ಇವತ್ತಿನ ದಿವಸ ಜನಸಾಮಾನ್ಯರು ಹೊರಗಡೆ ಓಡಾಡುವುದಕ್ಕೆ ಆಗದೆ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ಹಿಡಿಯುವುದಕ್ಕೆ ಕುರಿ, ನಾಯಿ ಇಟ್ಟರು. ಆದರೆ ಇವತ್ತಿನ ದಿವಸ ಏನಿಟ್ಟರೂ ಸಹ ನೋವಿನ ಒಳಗೆ ಅದು ಬರುತ್ತಿಲ್ಲ. ಆದ್ದರಿಂದ ಏನು ಮಾಡಬೇಕೆಂದು ತಾವು ಹೇಳಬೇಕು. ಮೂರು ಜನ ತೀರಿ ಹೋಗಿದ್ದಾರೆ. ಆದ್ದರಿಂದ ಮಾನ್ಯ ಅರಣ್ಯ ಸಚಿವರು ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡಿ ಏನು ಮಾಡುತ್ತಾರೆಂದು ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇವೆ. ಅರಸೀಕೆರೆಯಲ್ಲಿ ಕರಡಿ ಕಾಟ ಹೆಚ್ಚಾಗಿ ಸುಮಾರು 36 ಜನ ತೀರಿ ಹೋಗಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹಂದಿಗಳ ಕಾಟ ಹೆಚ್ಚಾಗಿ ಹೊರಗಡೆ ಓಡಾಡುವುದಕ್ಕಾಗುತ್ತಿಲ್ಲ. ಆ ಪರಿಸ್ಥಿತಿ ಇದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಿ ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಸಿ.ಪಿ. ಯೋಗೀಶ್ವರ್ (ಅರಣ್ಯ ಸಚಿವರು)** : ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಾಸನ ಅರಣ್ಯ ವಿಭಾಗದಲ್ಲಿ ಚಿರತೆ ಹಾವಳಿ ಒಂದು ಹತೋಟಿಗೆ ಬಂದಿದೆ. ಹೊಳೆನರಸೀಪುರ ಒಂದು ಕಡೆ ಮಾತ್ರ ನಾವು ಚಿರತೆ ಹಿಡಿಯುವುದಕ್ಕಾಗುತ್ತಿಲ್ಲ. ಚಿರತೆಗಳು ಎಲ್ಲಿ ಸಿಕ್ಕಿದರೂ ಕೊಂದು ಹಾಕಿ

ಎಂದು ಅರಣ್ಯ ಇಲಾಖೆಗೆ ಈಗಾಗಲೇ ತಾಕೀತು ಮಾಡಿದ್ದೇವೆ. ಏಕೆಂದರೆ ಅದು ಬೋನಿಗೂ ಬೀಳುತ್ತಿಲ್ಲ. ನಮ್ಮ ಇಲಾಖೆಯಿಂದ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಹಾಸನ ಅರಣ್ಯ ವಿಭಾಗದಲ್ಲಿ ನಾವು ಈಗಾಗಲೇ ಸಾಕಷ್ಟು ಚಿರತೆಗಳನ್ನು ಹಿಡಿದಿದ್ದೇವೆ. ಅರಕಲಗೂಡು ವಿಭಾಗದಲ್ಲಿ ಮಾನ್ಯ ಶಾಸಕರಾದ ಮಂಜುರವರು ಆಕ್ಷೇಪಣೆ ಮಾಡಿದ್ದರಿಂದ ಅಲ್ಲಿ ಈಗಾಗಲೇ ಎರಡು ಚಿರತೆಗಳನ್ನು ಹಿಡಿದು ಸುರಕ್ಷಿತ ಸ್ಥಳಗಳಿಗೆ ಬಿಟ್ಟಿದ್ದೇವೆ. ನಮ್ಮ ಇಲಾಖೆ ಅಲ್ಲಿ ಬಹಳ ಜಾಗರೂಕತೆಯಿಂದ ಕೆಲಸ ಮಾಡುತ್ತಿದೆ. ಹೊಳೆನರಿಸಿಪುರ ಮತ್ತು ಚನ್ನರಾಯಪಟ್ಟಣ ಈ ಕಡೆ ಬರತಕ್ಕಂತಹ ಪ್ರದೇಶಗಳಲ್ಲಿ ಒಂದು ಚಿರತೆಯೂ ನಮ ಕೈಗೆ ಸಿಗುತ್ತಿಲ್ಲ. ಎಷ್ಟು ಬೋನ್ ಹಾಕಿದರೂ, ಎಷ್ಟು ಕುರಿ ಕಟ್ಟಿದರೂ ಬೋನ್‌ಗೆ ಬೀಳುತ್ತಿಲ್ಲ. ನಾನು ಈಗಾಗಲೇ ಇಲಾಖೆಗೆ ತಿಳಿಸಿದ್ದೇನೆ. ಈ ಚಿರತೆಗಳನ್ನು ಜೀವಂತವಾಗಿ ಹಿಡಿಯಬೇಕು. ಇಲ್ಲ ಸಾಯಿಸಿ ಆದರೂ ಹಿಡಿಯಬೇಕು. ನಮ್ಮ ಇಲಾಖೆಯಲ್ಲಿ ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ. ಅದಷ್ಟು ಬೇಗೆ ಆ ಚಿರತೆಗಳಿಂದ ಆಗುತ್ತಿರುವ ತೊಂದರೆಯನ್ನು ತಪ್ಪಿಸುತ್ತೇನೆ.

**ಅಧ್ಯಕ್ಷರು:** ಹೊಳೆನರಿಸೀಪುರದ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

**6. ವಿಷಯ : ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರಕಿಸಿಕೊಡುವ ಬಗ್ಗೆ. :**

**ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) :** ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಮತ್ತು ನನ್ನ ಮತ ಕ್ಷೇತ್ರದಲ್ಲಿ ಸುಮಾರು 18 ಸಾವಿರ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದಿಂದ ಸಿಗತಕ್ಕಂತಹ ಈ ವಿದ್ಯಾರ್ಥಿವೇತನ ಅಕೌಂಟ್ ಓಪನ್ ಮಾಡುವ ತೊಂದರೆಯಿಂದ ಸಿಂಡಿಕೇಟ್ ಬ್ಯಾಂಕಿನವರು ರಿಟರ್ನ್ ಮಾಡುತ್ತಿದ್ದಾರೆ. ಅಲ್ಲಿ ಏನಾಗಿದೆ ಎಂದರೆ, ಅಕೌಂಟ್ ಓಪನ ಮಾಡುವುದಕ್ಕೆ ವೆಬ್‌ಸೈಟ್‌ನಲ್ಲಿ format ಕೊಟ್ಟಿದ್ದಾರೆ. ಆ format ನಲ್ಲಿ ಸಿಂಡಿಕೇಟ್ ಬ್ಯಾಂಕ್ ಎಂದು ಇದೆ ಸಿಂಡಿಕೇಟ್ ಬ್ಯಾಂಕಿನಲ್ಲಿ ತುಂಬಿ ಕೊಟ್ಟಿದ್ದಾರೆ ಅರ್ಜಿ ತುಂಬಿ ಕೊಟ್ಟು ಆದ